ಮೂಲ ದಾವಾ ನಂಃ 72/2017<br>ಪಿ ಡಬ್ಲುಃ 01

ಸಾಕ್ಷಿಯನ್ನು ದಿನಾಂಕಃ **28-08-2024** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃಶ್ರೀ ವಿ.ಆರ್.ಎನ್ ವಕೀಲರಿಂದಃ**

ದಾವಾ ಸ್ಥಳದ ಪಹಣಿ ಪತ್ರಿಕೆಯನ್ನು ನಾನು ಪರಿಶೀಲಿಸಿ ನೋಡಿದ್ದೇನೆ , ಅದರಲ್ಲಿ 5 ಜನರ ಹೆಸರು ಇರುತ್ತದೆ. ಸದರಿ 5 ಜನರನ್ನು ನಾವು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದು ಇರುವುದಿಲ್ಲ. ಸದರಿ ದಾವಾ ಸ್ಥಳವು ಇನ್ನೂ ವಿಭಾಗವಾಗಿದ್ದು ಇರುವುದಿಲ್ಲ. ಸದರಿ 5 ಜನರ ಹೆಸರನ್ನು ಪ್ರಸ್ತುತ ದಾವೆಯಲ್ಲಿ ಸೇರಿಸಲು ನಮಗೆ ಯಾವುದೇ ತೊಂದರೆ ಇರಲಿಲ್ಲ. ನನ್ನ , 2 ನೇ ವಾದಿ ಮತ್ತು ಶಂಕರ ಮುಕ್ರಿರವರ ಮನೆಗಳು ಸದರಿ ದಾವಾ ಸ್ಥಳದಲ್ಲಿರುತ್ತದೆ.

ಈ ಹಿಂದೆ ನಾವು ದಾಖಲಿಸಿದ ದಾವೆಯಲ್ಲಿ ಕಮೀಷನರವರು ನೇಮಕವಾಗಿದ್ದು , ಅವರು ದಾವಾ ಸ್ಥಳಕ್ಕೆ ಬಂದು ಪರಿಶೀಲಿಸಿ ನಕಾಶೆಯನ್ನು ತಯಾರಿಸಿದ್ದಾರೆ. ಸದರಿ ನಕಾಶೆಯನ್ನು ಪ್ರಸ್ತುತ ದಾವೆಯಲ್ಲಿ ನ್ಯಾಯಾಲಯದ ಮುಂದೆ ಹಾಜರುಪಡಿಸಿದ ಬಗ್ಗೆ ನನಗೆ ಮಾಹಿತಿ ಇಲ್ಲ. ದಾವಾ ದಾಖಲಿಸುವಾಗ , ದಾವಾ ಸ್ಥಳದ ಸ್ಥಿತಿಗತಿಯ ಬಗ್ಗೆ ನಾವು ನ್ಯಾಯಾಲಯದ ಮುಂದೆ ಫೋಟೋವನ್ನು ಹಾಜರುಪಡಿಸಿದ್ದು ಇರುವುದಿಲ್ಲ.

ಈ ದಾವೆ ದಾಖಲಿಸಿದ ನಂತರ ಕಮೀಷನರವರನ್ನು ನೇಮಕ ಮಾಡಿ , ದಾವಾ ಸ್ಥಳವನ್ನು ಪರಿಶೀಲಿಸಿ ವರದಿಯನ್ನು ಸಲ್ಲಿಸುವಂತೆ ಕೋರಿ ನ್ಯಾಯಾಲಯದ ಮುಂದೆ ಅರ್ಜಿಯನ್ನು ಸಲ್ಲಿಸಿದ್ದು ಇರುವುದಿಲ್ಲ.ದಾವಾ ಸ್ಥಳದಲ್ಲಿ ದಾರಿ ಇದೆ ಎಂದು ತೋರಿಸಲು ನಮ್ಮ ಹತ್ತಿರ ಫೋಟೋ ಹಾಗೂ ಯಾವುದೇ ದಾಖಲೆಗಳು ಇರುವುದಿಲ್ಲ.

ನಾವು ವಾದಪತ್ರದ ಜೊತೆಗೆ ಹಾಜರುಪಡಿಸಿರುವ ನಕಾಶೆಯಲ್ಲಿ ತೋರಿಸಿರುವಂತಹ ರೀತಿಯಲ್ಲಿ ದಾರಿ ಇರುವುದಿಲ್ಲ ಎಂದರೆ ಸರಿಯಲ್ಲ . ನಾನು ನ್ಯಾಯಾಲಯದ ಮುಂದೆ ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.<br>Sd/-<br>ಹೆಚ್ಚುವರಿ ಸಿವಿಲ್ ಜಡ್ಜ,ಹೊನ್ನಾವರ.